MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

| Vol.48 | ENGLISH DAILY | Subscription Yearly - Rs. - | WEDNESDAY | 5-1-2022 |
|---|---|---|---|---|

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಮಲೇಶ್ಯಾ ಪಾಮೆಣ್ಣೆ ಫ್ಯೂಚರ್ ದರ ಹೆಚ್ಚಳ, ಪ್ರತಿಕೂಲ ಹವಾಮಾನ

ಮಳೆ ಹಾಗೂ ನೆರೆಯಿಂದ ಪಾಮೆಣ್ಣೆ ಉತ್ಪಾದನೆ ಹಾಗೂ ಪೂರೈಕೆಗೆ ಸಮಸ್ಯೆಯಿಂದ ಮಲೇಶ್ಯನ್ ಪಾಮೆಣ್ಣೆ ಫ್ಯೂಚರ್ ದರ ಹಿಂದಿನ ಮೂರು ವಾರಗಳಲ್ಲೇ ಗರಿಷ್ಠ ಮಟ್ಟಕ್ಕೇರಿದೆಯೆನ್ನಲಾಗಿದೆ. ಪ್ರತಿಕೂಲ ಹವಾಮಾನದಿಂದ ಹಾಗೂ ಕಾರ್ಮಿಕರ ಅಭಾವದಿಂದ ಮಲೇಶ್ಯಾದ ಪಾಮೆಣ್ಣೆ ಉತ್ಪಾದನೆಯಲ್ಲಿ ಇಳಿಕೆ ಸಂಭವ ಹಾಗೂ ಪೂರೈಕೆಯ ವ್ಯತ್ಯಯದಿಂದ ದರ ಹೆಚ್ಚಳವಾಗುತ್ತಿದೆಯೆನ್ನಲಾಗಿದೆ. ಡಿಸೆಂಬರ್ ತಿಂಗಳ ಉತ್ಪಾದನೆ 8.5 ಶೇಕಡಾ ಇಳಿಕೆಯಾಗುವ ನಿರೀಕ್ಷೆಯಿದೆಯೆನ್ನಲಾಗಿದೆ ಹಾಗೂ ಡಿಸೆಂಬರ್ ತಿಂಗಳ ರಫ್ತು 5.3 ಶೇಕಡಾ ಇಳಿಕೆಯಾಗುವ ನಿರೀಕ್ಷೆಯಿದೆಯೆನ್ನಲಾಗಿದೆ.

## ಬ್ರೆಝಿಲ್ 2021-2022 ಸಕ್ಕರೆ ಉತ್ಪಾದನೆ 17.9 ಶೇಕಡಾ ಇಳಿಕೆ ಸಾಧ್ಯತೆ

ಬ್ರೆಜಿಲ್ ನ 2021-2022 ರ ಸಕ್ಕರೆ ಉತ್ಪಾದನೆ 17.9 ಶೇಕಡಾ ಇಳಿಕೆಯಾಗಿ ಹಿಂದೆ ಅಂದಾಜಿಸಿದ 36.9 ಮಿಲಿಯನ್ ಟನ್ ಗಳಿಂದಲೂ ಇಳಿಕೆಯಾಗಿ 33.9 ಮಿಲಿಯನ್ ಟನ್ ಗಳಾಗಬಹುದೆಂದು CONAB ಅಂದಾಜಿಸಿದೆಯೆನ್ನಲಾಗಿದೆ. ಥೈಲಾಂಡ್ ನ ಸಕ್ಕರೆ ರಫ್ತು ಹಿಂದಿನ ವರ್ಷಕ್ಕಿಂತ 67 ಶೇಕಡಾ ಹೆಚ್ಚಳವಾಗಿ 6.7 ಮಿಲಿಯನ್ ಟನ್ ಗಳಾಗಿ Czarnikow ಅಂದಾಜಿಸಿದೆಯೆನ್ನಲಾಗಿದೆ. ಅಂತರಾಷ್ಟ್ರೀಯ ಸಕ್ಕರೆ ದರ ಡಾಲರ್ ಮೌಲ್ಯ ಹೆಚ್ಚಳದಿಂದಾಗಿ ಸ್ವಲ್ಪ ಹೆಚ್ಚಳದಿಂದಾಗಿ ಸ್ವಲ್ಪ ಮಟ್ಟಿನ ಕುಸಿತ ಕಂಡಿದೆ. ಅಂತರಾಷ್ಟ್ರೀಯ ದರ ಹೆಚ್ಚಳವಾಗಲು ಭಾರತೀಯ ಮಿಲ್ ಗಳು ಸಕ್ಕರೆ ರಫ್ತು ಮಾಡಲು ಕಾಯುತ್ತಿದ್ದಾರೆನ್ನಲಾಗಿದೆ.